# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್– ಸಂಖ್ಯೆ 129 ರಲ್ಲಿ

## ದಿನಾಂಕ: 06.03.2021 ರಂದು, ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು

ದಿನಾಂಕ: 20.02.2021ರಂದು ವಾರ್ಡ್ ಸಂಖ್ಯೆ 129ರ ಮಾರ್ಚ್ ಮಾಹೆಯ ಮೊದಲನೇ ಶನಿವಾರದ ವಾರ್ಡ್‌ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

**ಹಾಜರಿದ್ದ ಸದಸ್ಯರು:–**

1. ಶ್ರೀ.ವಿಶ್ವನಾಥ್, ಅಧೀಕ್ಷಕ ಅಭಿಯಂತರರು ದಾಸರಹಳ್ಳಿ ವಲಯ ಹಾಗೂ ವಾರ್ಡ್ ಸಂಖ್ಯೆ–129ರ ನೋಡಲ್ ಅಧಿಕಾರಿಗಳು.
2. ನರೇಶ್, ವಾರ್ಡ್ ಮಾರ್ಷಲ್, ವಾರ್ಡ್–129
3. ಶ್ರೀ.ಹನುಮಂತರಾಜು, ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ
4. ಶ್ರೀಮತಿ ಮೀನಾ ಎನ್ ಬಿ.ಎಲ್.ಓ, ವಾರ್ಡ್–129.
5. ಶ್ರೀಮತಿ ರಾಜೇಶ್ವರಿ ಎಸ್ ಬಿ.ಎಲ್.ಓ, ವಾರ್ಡ್–129.
6. ಶ್ರೀ ಷಟ್ಟಾಳಯ್ಯ ಜಿ ಸೂಪರ್ ವೈಸರ್ ವಾರ್ಡ್–129.
7. ಶ್ರೀ ಸೂರಪ್ಪ ಸೂಪರ್ ವೈಸರ್ ವಾರ್ಡ್–129.
8. ಶ್ರೀ ರಾಮಾಂಜಿನಲು ಸೂಪರ್ ವೈಸರ್ ವಾರ್ಡ್–129.
9. ಶ್ರೀ ರಘು ಸೂಪರ್ ವೈಸರ್ ವಾರ್ಡ್–129.
10. ಶ್ರೀ ಬಾಲು ಸೂಪರ್ ವೈಸರ್ ವಾರ್ಡ್–129.
11. ಶ್ರೀ ರಾಮಣ್ಣ ಸಾರ್ವಜನಿಕರು, ಎನ್.ಜಿ.ಇ.ಎಫ್ ಬಡಾವಣೆ ಮಲ್ಲತ್ತಹಳ್ಳಿ.

ವಾರ್ಡ್ ಸಂಖ್ಯೆ–129ರ ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು.

### ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು

- ವಿಧಾನಸೌಧ ಬಡಾವಣೆಯ ನಿವಾಸಯಾದ ಶ್ರೀ ವೆಂಕಟೇಶ್ ರವರು ತಮ್ಮ ಪ್ರದೇಶದಲ್ಲಿ ಬೀದಿ ದೀಪಗಳು ಬೆಳಗುತ್ತಿಲ್ಲವೆಂದು ದೂರು ನೀಡಿ ಹಾಲಾಗಿರುವ ಬೀದಿ ದೀಪಗಳನ್ನು ದುರಸ್ಥಿಗೊಳಿಸುವಂತೆ ಕೋರಿದರು.

  ಕ್ರಮ:– ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್)

- ವಾರ್ಡ್ ವ್ಯಾಪ್ತಿಯ ಹಲವು ರಸ್ತೆಗಳಲ್ಲಿ ಬೀದಿ ಬದಿ ವ್ಯಾಪಾರಿಗಳು ವಾಣಿಜ್ಯ ಮಳಿಗೆಗಳು ಪಾದಚಾರಿ ಮಾರ್ಗ ಒತ್ತುವರಿ ಮಾಡಿಕೊಂಡಿದ್ದು, ಒತ್ತುವರಿ ತೆರವುಗೊಳಿಸಲು ಮುಂದಿನ ವಾರದಲ್ಲಿ "ಫುಟ್ ಪಾತ್ ಡ್ರೈವ್" ಕಾರ್ಯಕ್ರಮ ಹಮ್ಮಿಕೊಳ್ಳಲು ಸಭೆಯಲ್ಲಿ ಹಾಜರಿದ್ದ ವಿವಿಧ ಸಂಘಗಳ ಪದಾಧಿಕಾರಿಗಳು ಕೋರಿದರು.
- ಪೌರ ಕಾರ್ಮಿಕರಿಗೆ ಶೂ, ಸಮವಸ್ತ್ರ ಕೈಗೌಸು ಹಾಗೂ ಅಗತ್ಯ ಸಲಕರಣೆಗಳನ್ನು ನೀಡಲು ಬೂತ್ ಮಟ್ಟದ ಅಧಿಕಾರಿಗಳು ಕೋರಿದರು.

  ಕ್ರಮ:- ಕಿರಿಯ ಆರೋಗ್ಯ ಪರಿವೀಕ್ಷಕರು/ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ)

- ಜೋಸೆಫ್ ಶಾಲೆಯ ಹತ್ತಿರ ಅನ್ನಪೂರ್ಣೇಶ್ವರಿ ನಗರದಿಂದ ಶ್ರೀಗಂಧದ ಕಾವಲು ಬಸ್ ಸ್ಟಾಪ್ ವರೆಗಿನ ರಸ್ತೆ ಬದಿ ಚರಂಡಿ ಅಭಿವೃದ್ಧಿಪಡಿಸಲು ಕೋರಿದರು ಈ ಸಂಬಂಧ ಉತ್ತರಿಸಿದ ಸಹಾಯಕ ಅಭಿಯಂತರರು ಮುಂಬರುವ ಪಾಲಿಕೆಯ ಬಜೆಟ್ ನಲ್ಲಿ ಒದಗಿಸಲಾಗುವ ಅನುದಾನದಲ್ಲಿ ಆದ್ಯತೆಯ ಮೇರೆಗೆ ಸದರಿ ಚರಂಡಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದೆಂದು ತಿಳಿಸಿದರು.

ಸಹಾಯ ಆಪ್ ನಲ್ಲಿ ದಾಖಲಾಗಿರುವ ದೂರುಗಳಿಗೆ ಸಂಬಂಧಿಸಿದಂತೆ ಆದ್ಯತೆ ಮೇರೆಗೆ ಕ್ರಮ ವಹಿಸಲು ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೂ ಸೂಚಿಸುತ್ತಾ ಅಂದಿನ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಮೇಲಿನ ದೂರುಗಳಿಗೆ ಸಂಬಂಧಿಸಿದ ಅಧಿಕಾರಿಗಳು, ಅವರ ವ್ಯಾಪ್ತಿಯ ದೂರುಗಳಿಗೆ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಕೈಗೊಂಡ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ತಪ್ಪದೇ ವರದಿ ಮಾಡಲು ತಿಳಿಸಿದೆ.

ಸಹಿ/-

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-129

ಕಾರ್ಯದರ್ಶಿಗಳು ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ-129

**ಪ್ರತಿಯನ್ನು:**

1. ಆಪ್ತಸಹಾಯಕರು, ಮಾನ್ಯ ವಿಶೇಷ ಆಯುಕ್ತರು ಆಡಳಿತರವರಿಗೆ ಕಳುಹಿಸುತ್ತಾ, ಸದರಿ ಸಭೆಯ ನಡವಳಿಗಳನ್ನು ಮಾನ್ಯ ವಿಶೇಷ ಆಯುಕ್ತರು ಆಡಳಿತರವರ ಅವಗಾಹನೆಗೆ ತರಲು ಕೋರಿದೆ.
2. ಜಂಟಿ ಆಯುಕ್ತರು ರಾಜಾನಗರ ವಲಯರವರ ಮಾಹಿತಿಗಾಗಿ.
3. ಮುಖ್ಯ ಅಭಿಯಂತರರು ರಾಜಾನಗರ ವಲಯರವರ ಮಾಹಿತಿಗಾಗಿ.
4. ಕಾರ್ಯಪಾಲಕ ಅಭಿಯಂತರರು ರಾಜಾನಗರ ವಿಭಾಗ ರವರ ಮಾಹಿತಿಗಾಗಿ.
5. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
6. ವಾರ್ಡ್ ಸಮಿತಿ ಸದಸ್ಯರುಗಳಿಗೆ.
7. ಕಛೇರಿ ಪ್ರತಿ.